www.ecourtsindia.com

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**ಸಿ.ಸಿ. ಸಂಖ್ಯೆ.2436/2023**

**ಪಿರ್ಯಾದುದಾರರು** : ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರಿಂದ

**-ವಿರುದ್ಧ-**

ಆರೋಪಿತರು : ರಾಜಪ್ಪ ಎನ್.ಬಿ. ಬಿನ್ ಬಸಪ್ಪ, 53 ವರ್ಷಗಳು,
ಚಾಲಕ, ವಾಸ : ನೀರಗುಂದ ಗ್ರಾಮ, ಸಾಣೇಹಳ್ಳಿ
ಪೋಸ್ಟ್ , ಹೊಸದುರ್ಗ ತಾಲ್ಲೂಕು.

**-: ಆ ಪಾ ದ ನೆ:-**

ದಿನಾಂಕ 11.06.2023 ರಂದು ಮಧ್ಯಾಹ್ನ ಸುಮಾರು 12-30 ಗಂಟೆ ಸಮಯದಲ್ಲಿ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಹುರುಕನಹಳ್ಳಿ ಗೇಟ್ ಬಳಿ ಪಿರ್ಯಾದುದಾರರ ಚಿಕ್ಕಪ್ಪನವರಾದ ಮಲ್ಲೇಶಪ್ಪನವರು ಹಿರೇಬಳ್ಳೇಕೆರೆಯಿಂದ ಹುರುಕನಹಳ್ಳಿ ಕಡೆಗೆ ಕೆ.ಎ.ಆ 5 ಕೆ.91456 ಸ್ಪೆಂಡರ್ ಮೋಟಾರು ಬೈಕನ್ನು ರಸ್ತೆಯ ಎಡಬದಿಯಲ್ಲಿ ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ, ಆರೋಪಿಯಾದ ನೀವು ಕೆಎ-66-2629 ಭಾರತ್ ಬೆಂಚ್ ಟಿಪ್ಪರ್ ಲಾರಿಯನ್ನು ಗಿರಿಯಾಪುರದಿಂದ ಚಿಕ್ಕಬಳ್ಳೇಕೆರೆ ಕಡೆಗೆ ಅತಿ ವೇಗ ಮತ್ತು ಅಜಾಗರೂಕತೆಯಿಂದ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಮಲ್ಲೇಶಪ್ಪನವರು ಚಾಲನೆ ಮಾಡುತ್ತಿದ್ದ ಬೈಕ್ಗೆ ಎದುರುಗಡೆಯಿಂದ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮಲ್ಲೇಶಪ್ಪನವರು ಹಿರೇಬಳ್ಳೇಕೆರೆಯಿಂದ ಹುರುಕನಹಳ್ಳಿ ಕಡೆಗೆ ಕೆ.ಎ.ಆ 5 ಕೆ.91456 ಸ್ಪೆಂಡರ್ ಮೋಟಾರು ಬೈಕನ್ನು ರಸ್ತೆಯ ಎಡಬದಿಯಲ್ಲಿ ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ, ಆರೋಪಿಯಾದ ನೀವು ಕೆಎ-66-2629 ಭಾರತ್ ಬೆಂಚ್ ಟಿಪ್ಪರ್ ಲಾರಿಯನ್ನು ಗಿರಿಯಾಪುರದಿಂದ ಚಿಕ್ಕಬಳ್ಳೇಕೆರೆ ಕಡೆಗೆ ಅತಿ ವೇಗ ಮತ್ತು ಅಜಾಗರೂಕತೆಯಿಂದ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಮಲ್ಲೇಶಪ್ಪನವರು ಚಾಲನೆ ಮಾಡುತ್ತಿದ್ದ ಬೈಕ್ಗೆ ಎದುರುಗಡೆಯಿಂದ ಡಿಕ್ಕಿಪಡಿಸಿ ಅಪಘಾತಪಡಿಸಿದ ಪರಿಣಾಮ, ಮಲ್ಲೇಶಪ್ಪನವರ ಬೈಕ್ ಸಮೇತ ರಸ್ತೆಯ ಮೇಲೆ ಬಿದ್ದಿದ್ದು, ಟಿಪ್ಪರ್ ಲಾರಿಯು ಮೋಟಾರ್ ಬೈಕ್ನ ಹಿಂಭಾಗದ ಚಕ್ರದ ಮೇಲೆ ಹತ್ತಿದ್ದು, ಮಲ್ಲೇಶಪ್ಪನವರ ತಲೆಗೆ ಪೆಟ್ಟಾಗಿ ಸ್ಥಳದಲ್ಲೇ ಮೃತಪಡಲು

This is a True Copy of the Court Records Online. Authenticated @ districts.ecourtsindia.com/cnr/KACM210036762023/truecopy/order-1.pdf

ಕಾರಣರಾಗಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 304 (ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಸದರಿ ಅಪಘಾತದ ಕುರಿತು ಪೋಲೀಸರಿಗೆ ಮಾಹಿತಿ ನೀಡದೆ ಹಾಗೂ ಗಾಯಾಳುವನ್ನು ಚಿಕಿತ್ಸೆಗೆ ಒಳಪಡಿಸದೇ ಸ್ಥಳದಿಂದ ಪರಾರಿಯಾಗಿರುತ್ತೀರಿ. ಆದ್ದರಿಂದ ನೀವು ಮೋಟಾರು ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉಃ ತಿಳಿಯಿತು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉಃ ತಿಳಿಯಿತು, ವಿಚಾರಣೆ ಆಗಬೇಕು.

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ 02 ನೇ ಜನವರಿ 2024.

ಸಹಿ-

**(ರಾಮ್ ಪ್ರಶಾಂತ್ ಎಂ.ಎನ್.),**
**ಪ್ರಧಾನ ಪ್ರದನ್ಯಾದಂ., ಕಡೂರು.**

This is a True Copy of the Court Records Online. Authenticated @ districts.ecourtsindia.com/cnr/KACM210036762023/truecopy/order-1.pdf

www.ecourtsindia.com